ಇ) ಅನಧಿಕೃತವಾಗಿ ಅತಿಕ್ರಮಿಸಿರುವ ವಾಲೀಕರಿಬ್ಬರಲ್ಲಿ ಒಬ್ಬರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಂ. ಳ೦೦೫೬/೮೨ ಹಾಕಿ ತಡೆಯಾಜ್ಞೆಯನ್ನು ತೆರುವು ಮಾಡುವ ವಿರುದ್ಧ ದಿನಾಂಕ ೨೩-೧೧-೮೫ ರಂತೆ ಪಡೆದಿದ್ದಾರೆ. ತಡೆಯಾಜ್ಞೆಯನ್ನು ತೆರವು ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುವುದು ಸದರಿ ವಿಷಯದಲ್ಲಿ ವಿಚಾರಣೆಯನ್ನು ಶೀಘ್ರದಲ್ಲಿ ಮಾಡಲು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಸೂಚಿಸಲಾಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನನ್ನ ಮೊದಲನೆಯ ಹಾಗೂ ಎರಡನೆಯ ಪ್ರಶ್ನೆಗಳಿಗೆ ಹೌದು ಮತ್ತು ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಮೂರನೆಯ ಪ್ರಶ್ನೆಗೆ ೨೩-೮೫ರಲ್ಲಿ ಅವರು ತಡೆಯಾಜ್ಞೆ ತಂದಿದ್ದಾರೆ ಎಂದು ಹೇಳಿದ್ದಾರೆ. ಅನ್ ಅಥರೈಸ್ಡ್ ಕನ್‌ಸ್ಟ್ರಕ್ಷನ್ ಮಾಡುತ್ತಿರುವಂತಹ ಇಬ್ಬರಲ್ಲಿ ಒಬ್ಬರು ತಡೆಯಾಜ್ಞೆ ತಂದಿದ್ದಾರೆ ಎಂದು ಹೇಳಿದ್ದಾರೆ. ೨೩-೮೫ರಲ್ಲಿ ತಡೆಯಾಜ್ಞೆ ತಂದಿದ್ದಾರೆ. ಇಲ್ಲಿಗೆ ಐದು ವರ್ಷ ಮುಗಿಯುತ್ತಾ ಬಂತು. ಗುಂಡೂರಾಯರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ, ಬೆಂಗಳೂರಿನಲ್ಲಿರತಕ್ಕಂಥ ಎಲ್ಲಾ ಸ್ಲಮ್‌ನವರಿಗೆ, ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಕಟ್ಟಿ ವಸತಿ ಸೌಲಭ್ಯ ಮಾಡಿಕೊಡುತ್ತೇವೆಂದು ಹೇಳಿ, ಅವರನ್ನೆಲ್ಲಾ ಈ ಜಾಗದಲ್ಲಿ ತೆಗೆದು ಕೊಂಡು ಹೋಗಿ ಹಾಕಿದ್ದರು. ಈ ಜಾಗದ ಪಕ್ಕದಲ್ಲಿರುವ ಪ್ರಾಕ್ಟರಿ ವಾಲೀಕರು ಅನ್ ಅಥರೈಸ್ಡ್ ಆಗಿ, ಬಿ.ಡಿ.ಎ. ಯಿಂದಾಗಲೀ, ಸರಕಾರದ ಯಾವುದೇ ಒಂದು ಇಲಾಖೆಯಿಂದಾಗಲೀ ಅನುಮತಿ ಪಡೆಯದೇ, ಅನ್‌ಅಥರೈಸ್ಡ್ ಕನ್‌ಸ್ಟ್ರಕ್ಷನ್ ಮಾಡುತ್ತಿದ್ದಾರೆ. ೧೯೮೫ರಲ್ಲಿ ಅವರು ಕಟ್ಟಿಡ ಕಟ್ಟಿದ್ದರೂ ಸರಕಾರ ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ, ಏಕಕ್ಕೆ ತೆಗೆದುಕೊಂಡಿಲ್ಲ. ತೆಗೆಕೊಳ್ಳದಿರುವುದಕ್ಕೆ ಅಧಿಕಾರಿಗಳೇನಾದರೂ ಶಾಮೀಲಾಗಿದ್ದಾರೆಯೇ ಎಂಬುದನ್ನು ತಿಳಿಸಬೇಕು. ಇಂತಹ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನೂ ತಿಳಿಸಬೇಕು.

ಶ್ರೀ ಟಿ. ಎನ್ ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿ ಏನಿದೆ ಅದು ನನಗೂ ಅರ್ಥವಾಗುತ್ತಿದೆ. ಸಮಾಜದಲ್ಲಿ ನೊಂದ ವರ್ಗದವರಿಗಾಗಿ ಕೈಗೊಳ್ಳುವಂತಹ ಇಂತಹ ಕಾರ್ಯಕ್ರಮಗಳಲ್ಲಿ ಅಡ್ಡಿ ಆತಂಕಗಳು ಯಾವ ಹಂತದಲ್ಲೂ ಆಗಬಾರದು. ಇದು ನ್ಯಾಯಾಲಯದ ಮುಂದೆ ಹೋಗಿ ತಡೆಯಾಜ್ಞೆ ಆಗಿದೆ. ಅದನ್ನು ತೆರವು ಮಾಡುವುದರಲ್ಲಿ ನಾವು ಸ್ವಲ್ಪ ಮಂದಗತಿಯಲ್ಲಿ ಇದ್ದೇವೆ ಎಂಬ ವಾದ ಏನಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಂತಹ ಸಂದರ್ಭಗಳಲ್ಲಿ ಆದ್ಯತೆಯ ಮೇರೆಗೆ ತಡೆಯಾಜ್ಞೆಯನ್ನು ತೆರವು ಮಾಡಿಸಬೇಕೆಂದು ಆ ರೀತಿ ನಮ್ಮೋಭಾವವನ್ನು ಅರ್ಥಮಾಡಿಕೊಂಡು ಕ್ರಮಕೈಗೊಳ್ಳಬೇಕೆಂದು ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ. ಈ ಬಗ್ಗೆ ಕೂಡಲೇ ಆದ್ಯತೆಯ ಮೇಲೆ ಕ್ರಮ ತೆಗೆದುಕೊಂಡು ತಡೆಯಾಜ್ಞೆಯನ್ನು ತೆರವು ಮಾಡಿಸ ಬೇಕೆಂದೂ ಸೂಚನೆ ಮಾಡಿರುತ್ತೇನೆ. ಈ ಸ್ಟೇ ಆರ್ಡರ್ ಏನಿದೆ ಅದನ್ನು ಆದ್ಯತೆ ಮೇಲೆ ತೆರವು ಮಾಡಿಸುವುದಕ್ಕೆ ಸರಕಾರ ಕ್ರಮ ಕೈಗೊಳ್ಳುತ್ತದೆಂದು ನಾನು ತಮ್ಮ ಮೂಲಕ ಭರವಸೆ ಕೊಡುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇದು ೫ ವರ್ಷಗಳಾಗಿದೆ. ಅಧಿಕಾರಿಗಳು ಅವರ ಜೊತೆಯಲ್ಲಿ ಶಾಮೀಲಾಗಿರತಕ್ಕಂಥಾದ್ದು. ಒಂದು ಅಲ್ಲಿ ಅವರು ಎರಡು ಬಿಲ್ಡಿಂಗ್ ಕಟ್ಟುತ್ತಿದ್ದಾರೆ. ಅಲ್ಲಿರತಕ್ಕಂಥ ಹತ್ತಾರುಸಾವಿರ ಜನ ಪೆಡ್ಲ್‌ರ್‌ಗಳನ್ನು ಏನು ಹಾಕಿಕೊಂಡಿದ್ದಾರೆ ಅವರನ್ನು ಅಲ್ಲಿಂದ ಓಡಿಸುತ್ತಿದ್ದಾರೆ. ಅವರು ಬಿಲ್ಡಿಂಗ್ ಕಟ್ಟಿಕೊಳ್ಳುವುದಕ್ಕಾಗಿ ಇವರನ್ನೆಲ್ಲಾ ಓಡಿಸುತ್ತಿದ್ದಾರೆ. ಅವರ ಜೊತೆಗೆ ಬೇರೆಯವರೂ ಸಹ ಅಲ್ಲಿ ಬಿಲ್ಡಿಂಗ್ ಕಟ್ಟಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಒಟ್ಟಾರೆ ಯಾಗಿ ನೀವು ತೀರ್ಮಾನ ತೆಗೆದುಕೊಳ್ಳತಕ್ಕದ್ದು, ತಡೆಯಾಜ್ಞೆ ತೆರವು ಮಾಡಿಸತಕ್ಕದ್ದು ಡೆಮಾಲಿಷ್ ಮಾಡಿಸತಕ್ಕದ್ದು ಒಂದು ಕಡೆ ಇರಲಿ. ಈ ಬಗ್ಗೆ ಇದಂವರಿಗೂ ಏನೂ ಕ್ರಮ ತೆಗೆದುಕೊಳ್ಳದೇ ಇದ್ದಂಥ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಪ್ರಶ್ನೆ ಮಾಡುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ

೧೦೬೮. ಶ್ರೀ ಪುತ್ತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ —

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಹಿರಿಯ ಪ್ರಾಥಮಿಕ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು).

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಈಗ ಇರುವ ಅಧ್ಯಾಪಕರ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು).

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಿಗೆ ಮಂಜೂರಾದ ಅಧ್ಯಾಪಕರ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು).

(ಈ) ವಿದ್ಯಾರ್ಥಿಗಳ ಪ್ರಮಾಣಕ್ಕನುಗುಣವಾಗಿ ಕೊರತೆ ಇರುವ ಅಧ್ಯಾಪಕರ ಸಂಖ್ಯೆ ಎಷ್ಟು

ಉ) ಈ ಕೊರತೆಯನ್ನು ಯಾವಾಗ ನೀಗಿಸಲಾಗುವುದು?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಮಂತ್ರಿಗಳು)—

೧) ಕಿರಿಯ ಪ್ರಾಥಮಿಕ ಶಾಲೆಗಳು—೫೩೧

೨) ಹಿರಿಯ ಪ್ರಾಥಮಿಕ ಶಾಲೆಗಳು—೭೫೬ ಅನುಬಂಧ ನೋಡಿಂಪುದು

೪೯೭೮ ಅನುಬಂಧ ನೋಡುವುದು
೫೪೬೦ ಅನುಬಂಧ ನೋಡುವುದು
೫೦.೧ ಅನುಪಾತದಂತೆ ೪೮೮ ಶಿಕ್ಷಕರ ಕೊರತೆ ಇದೆ.
ಸರ್ಕಾರದ ಪರಿಶೀಲನೆಯಲ್ಲಿದೆ.

ಅನುಬಂಧ

	ತಾಲ್ಲೂಕು	ಸರ್ಕಾರಿ ಪ್ರಾಥಮಿಕ ಶಾಲೆಗಳು		ಈಗ ಇರುವ ಅಧ್ಯಾಪಕರ ಸಂಖ್ಯೆ	ಮಂಜೂರಾದ ಅಧ್ಯಾಪಕರ ಸಂಖ್ಯೆ
		ಕಿರಿಯ ಪ್ರಾಥಮಿಕ ಶಾಲೆಗಳು	ಹಿರಿಯ ಪ್ರಾಥಮಿಕ ಶಾಲೆಗಳು		
೧	ಮಂಗಳೂರು	೨೭	೧೧೪	೪೨೫	೪೪೭
೨	ಉಡುಪಿ	೪೨	೯೪	೭೫೧	೪೦೦
೩	ಕುಂದಾಪುರ	೧೪೨	೧೧೬	೪೯೦	೯೪೨
೪	ಕಾರ್ಕಳ	೭೭	೯೧	೬೩೪	೭೩೭
೫	ಪುತ್ತೂರು	೫೧	೧೦೬	೫೪೦	೫೯೭
೬	ಸುಳ್ಯ	೬೫	೬೧	೪೨೪	೪೬೪
೭	ಬಂಟ್ವಾಳ	೬೨	೪೧	೪೪೧	೫೪೫
೮	ಬೆಳ್ತಂಗಡಿ	೬೫	೪೫	೪೨೫	೪೪೪
	ಒಟ್ಟು	೫೩೧	೭೫೬	೪೯೭೮	೫೪೬೦

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ವಿದ್ಯಾರ್ಥಿಗಳ ಪ್ರಮಾಣಕ್ಕೆ ಅನುಗುಣವಾಗಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು ಶಿಕ್ಷಕರ ಕೊರತೆ ಇದೆ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಈ ಕೊರತೆಯನ್ನು ಯಾವಾಗ ತುಂಬಲಾಗುವುದು? ಪಂತ್ರೆ ನನಗೆ ತಿಳಿದ ಪ್ರಕಾರ ಮಂಜೂರಾದ ಶಾಲೆಗಳಿಗೆ ಹುದ್ದೆಗಳನ್ನು ಮಂಜೂರು ಮಾಡಿದರೆ ಅನುಕೂಲವಾಗುತ್ತವೆ ಮತ್ತು ಎಷ್ಟು ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರಮಾಣಕ್ಕೆ ಅನುಗುಣವಾಗಿ ಉಪಾಧ್ಯಾಯರ ಕೊರತೆ ಇದೆ. ಇದನ್ನು ಯಾವಾಗ ಸರಿ ಮಾಡುತ್ತೀರಾ?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಈಗ ಇಲ್ಲಿ ಇರುವ ಖಾಲಿ ಉಪಾಧ್ಯಾಯರ ಸಂಖ್ಯೆ ಮತ್ತು ಮಂಜೂರು ಮಾಡಿದ ಸಂಖ್ಯೆ ಲೆಕ್ಕಕ್ಕೆ ತೆಗೆದುಕೊಂಡರೆ ನಮಗೆ ಳಿವಿ ಹುದ್ದೆಗಳನ್ನು ತುಂಬ ಬೇಕಾಗುತ್ತದೆ. ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆ ಕೇಳಿದ್ದರೆ ಅದೇನೆಂದರೆ ೫೦ ಜನ ಹುಡುಗರಿಗೆ ಒಬ್ಬ ಉಪಾಧ್ಯಾಯರಂತೆ ಎಷ್ಟು ಹುದ್ದೆಗಳು ಬೇಕಾಗುತ್ತದೆ ಎಂದು ಕೇಳಿದ್ದಾರೆ. ಆದಕ್ಕೆ ಒಟ್ಟು ಳಿವಿ ಹುದ್ದೆಗಳು ಎಂದು ಹೇಳಿದ್ದೇನೆ. ಈ ಳಿವಿ ಹುದ್ದೆಗಳು ಏನಿವೆ, ಅವುಗಳನ್ನು ಅತಿ ಶೀಘ್ರದಲ್ಲಿ ತುಂಬ ತಕ್ಕಂಥ ಒಂದು ಕೆಲಸ ಮಾಡಲಾಗುತ್ತದೆ. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಮುಂದೆ ಭರ್ತಿ ಮಾಡುವಾಗ ಜಾಗ್ರತೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ ಹಿಂದಿನ ಸರ್ಕಾರ ಅಧಿಕಾರದಲ್ಲಿ ಇದ್ದಂಥ ಸಂದರ್ಭದಲ್ಲಿ ಈ ಒಂದು ನೇಮಕಾತಿ ನಿಧಾನಗತಿಯಲ್ಲಿ ಸಾಗಿದ್ದರಿಂದ ತುಂಬಾ ಕಷ್ಟ ಆಯಿತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ೮ ತಿಂಗಳಾದರೂ ಸಹ ಈ ಉಪಾಧ್ಯಾಯರ ಕೊರತೆ ನಿಗದೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಶಾಲೆಗಳಿಗೆ ಭಾರಿ ಕಷ್ಟದಪರಿಸ್ಥಿತಿ ಇದೆ ತಾವು ಎಷ್ಟು ಸಮಯದ ಒಳಗಡೆ ಈ ಹುದ್ದೆಗಳನ್ನು ತುಂಬುತ್ತೀರಿ ಎನ್ನುವ ಆಶ್ವಾಸನೆ ಏನ್ನು ಕೊಡುತ್ತೀರಾ?

ಶ್ರೀ ಕೆ. ಎಚ್. ರಂಗನಾಥ್. —ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಆಪಾದನೆಯನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದು ೬-೭ ತಿಂಗಳಲ್ಲಿ ಈ ಬಗ್ಗೆ ಸಾಕಷ್ಟು ಪ್ರಯತ್ನ ನಡೆದಿದೆ. ಎಲ್ಲಾ ಕೆಲಸಗಳೂ ಶೀಘ್ರಗತಿಯಿಂದ ನಡೆದಿದೆ. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಸಹ ಶೀಘ್ರವಾಗಿ ಮಾಡುತ್ತೇವೆ.

ರಾಜ್ಯದಲ್ಲಿ ಖುಷ್ಕಿ ಅಭಿವೃದ್ಧಿ ಯೋಜನೆ

೧೧೨೧. ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಖುಷ್ಕಿ ಅಭಿವೃದ್ಧಿ ಯೋಜನೆಯನ್ನು ರಾಜ್ಯದಲ್ಲಿ ಯಾವಾಗ ಪ್ರಾರಂಭಿಸಲಾಯಿತು ?

ಆ) ಇದುವರೆಗೆ ಈ ಯೋಜನೆಗೆ ವೆಚ್ಚ ಮಾಡಿರುವ ಒಟ್ಟು ಹಣವೆಷ್ಟು ? ಮತ್ತು ಯೋಜನೆಗಳ ರೂಪಗಳಾವವು ?

ಇ) 1989-90ನೇ ಸಾಲಿನಲ್ಲಿ ಈ ಯೋಜನೆಗೆ ಖರ್ಚು ಮಾಡಿರುವ ಹಣವೆಷ್ಟು ? ಮತ್ತು 1990-91ನೇ ಸಾಲಿನಲ್ಲಿ ಖರ್ಚು ಮಾಡಲು ಉದ್ದೇಶಿಸಿರುವ ಹಣವೆಷ್ಟು ?

ಈ) ವಿಭಾಗೀಯ ಮಟ್ಟದಲ್ಲಿ ಖುಷ್ಕಿ ಅಭಿವೃದ್ಧಿ ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ಹೆಚ್ಚಿನ ಪ್ರಮಾಣದಲ್ಲಿ ಜಲಾನಯನ ಆಧಾರದ ಮೇಲೆ ಖುಷ್ಕಿ ಭೂ ಅಭಿವೃದ್ಧಿ ಕಾರ್ಯಕ್ರಮವನ್ನು 1984-85ರಿಂದ ತೆಗೆದುಕೊಳ್ಳಲಾಗಿದೆ.

ಆ) 1984-85ರಿಂದ 1989-90ರ ವರೆಗೆ 19ಜಿಲ್ಲಾ ಜಲಾನಯನ ಕಾರ್ಯಗಳಿಗಾಗಿ ಒಟ್ಟು 53.77 ಕೋಟಿ ರೂ.ಗಳು ಖರ್ಚಾಗಿರುತ್ತದೆ. ಖುಷ್ಕಿ ಭೂ ಅಭಿವೃದ್ಧಿ ಕಾರ್ಯಕ್ರಮದ ಮುಖ್ಯ ರೂಪಗಳಾವುವೆಂದರೆ

1) ಮಳೆ ಆಧಾರಿತ ಕೃಷಿ ಸಾಗುವಳಿಯಲ್ಲಿನ ತೊಂದರೆಗಳನ್ನು ಕನಿಷ್ಟಗೊಳಿಸುವುದು.

2) ಸ್ಥಳದಲ್ಲೇ ಇಂಗುವ ತೇವಾಂಶವನ್ನು ಸಂರಕ್ಷಿಸಿ ಸುಧಾರಿತ ಬೆಳೆ ವ್ಯವಸ್ಥೆ ಮೂಲಕ ಮಳೆ ನೀರಿನ ಗರಿಷ್ಠ ಪ್ರಯೋಜನ ಪಡೆಯುವುದು.